ಇಲ್ಲಿ ಕಾಣಿಸುವುದಿಲ್ಲ. ಯಾಂಗ್ ಹೇಯ ತಲ್ಲಣಗಳನ್ನು ಅರ್ಥ ಮಾಡಿಕೊಂಡು ಅವಳನ್ನು ಉಳಿಸಿಕೊಳ್ಳಲು ಯತ್ನಿಸುವ ಅವಳ ಅಕ್ಕ ಮತ್ತು ತನ್ನ ಚಿತ್ರಕಲೆಯ ಮೂಲಕವೇ ಅವಳ ಚೈತನ್ಯವನ್ನು ಒಂದಿಷ್ಟು ಅರಳಿಸುವ ಅಕ್ಕನ ಗಂಡ ಇಲ್ಲಿ ನೆನಪಾಗುತ್ತಾರೆ.

ಮನುಷ್ಯ ಸಂಪೂರ್ಣ ಮುಗ್ಧನಾಗಿರಬಹುದೆ? ನಮ್ಮೊಳಗೆ ಹುಟ್ಟುವ ಹಿಂಸೆಯನ್ನು ಹೇಗೆ ಹತ್ತಿಕ್ಕುತ್ತೇವೆ? ನಾವು ಹಿಂಸೆಯನ್ನು ನಿರಾಕರಿಸುವ ವ್ಯಕ್ತಿಗಳಾಗುವುದು ಸಾಧ್ಯವೇ? ಎನ್ನುವ ಪ್ರಶ್ನೆಗಳ ಸುತ್ತ ಹಾನ್ ಕಾಂಗ್‌ರ ಎರಡೂ ಕಾದಂಬರಿಗಳು ಸುತ್ತುತ್ತವೆ. 'ಮಾಂಸ ತಿನ್ನುವುದರ ಬಗೆಗಿನ ನನ್ನ ಪಶ್ಚಾತ್ತಾಪವು ಗ್ವಾಂಜು ಘಟನೆಯ ಅನುಭವದ ಜೊತೆ ಕೂಡಿಕೊಂಡಿರಬಹುದು' ಎನ್ನುವ ಹಾನ್ ಕಾಂಗ್‌ರ ಮಾತಿನಲ್ಲಿ ಅವರ ಎರಡೂ ಕಾದಂಬರಿಗಳು ಒಂದರ ಮುಂದುವರಿಕೆಯಾಗಿ ಮತ್ತೊಂದು ಅಥವಾ ಒಂದರ ಒಳಹೊಕ್ಕು ಮತ್ತೊಂದು ಬೆಳೆಯುತ್ತವೆ.

ಎಲ್ಲರಂತೆ ಸರಳ, ಸಾಮಾನ್ಯ ಬದುಕನ್ನು ನಡೆಸುವ 'ದ ವೆಜಿಟೇರಿಯನ್' ಕೃತಿಯ ಯಾಂಗ್ ಹೇ ಒಂದು ರಾತ್ರಿ ಮಲಗಿ ಬೆಳಗಾಗಿ ಏಳುವ ಹೊತ್ತಿಗೆ ತಾನು ಬದಲಾಗಿದ್ದೇನೆ ಅನ್ನಿಸಿದ ಕೂಡಲೆ ಇಡೀ ಜಗತ್ತು ಬದಲಾಗಿಬಿಡುತ್ತದೆ. ತಾನು ಸಸ್ಯಾಹಾರಿಯಾಗಬೇಕೆಂಬ ಒಂದು ಪವಿತ್ರ ಆಲೋಚನೆಯ ಸ್ವಾತಂತ್ರ್ಯಕ್ಕೆ ಬದ್ಧವಾದ ಕೂಡಲೇ ಅವಳ ಅಲ್ಲಿವರೆಗಿನ ಬದುಕು ಏರುಪೇರಾಗುತ್ತದೆ. ಅವಳ ದೇಹ ಮತ್ತು ಮನಸ್ಸನ್ನು ಬದಲಿಸುವ ಸುತ್ತಮುತ್ತಲಿನವರ ಪ್ರಯತ್ನಗಳೆಲ್ಲ ಹಿಂಸಾತ್ಮಕವಾಗತೊಡಗುತ್ತವೆ. 'ಹ್ಯೂಮನ್ ಆಕ್ಟ್ಸ್'ನಲ್ಲಿ ದಿನವೂ ಜೊತೆಗಿರುತ್ತಿದ್ದ ಗೆಳೆಯ ಡಾಂಗ್ ಹೋ ಒಂದು ದಿನ ಬೆಳಗ್ಗೆ ನಾಪತ್ತೆಯಾಗುತ್ತಾನೆ. ಅಲ್ಲಿವರೆಗೂ ತನ್ನ ಬದುಕಿನಿಂದ ಹೊರಗಿದ್ದ ದಂಗೆಯ ಹಿಂಸೆಯು ಆ ಕ್ಷಣ ಕಾದಂಬರಿಯ ನಾಯಕನ ಒಳಗೆ ಪ್ರವೇಶಿಸುತ್ತದೆ. ಇದ್ದಕ್ಕಿದ್ದಂತೆ ಅವನ ಬದುಕಿನ ಗತಿ ಬದಲಾಗಿ ಹೊಸ ಹುಡುಕಾಟ ಶುರುವಾಗುತ್ತದೆ.

ಹಿಂಸೆಯಿಂದ ಆರಂಭಗೊಳ್ಳುವ ಎರಡೂ ಕೃತಿಗಳ ಹೋರಾಟವು ಆತ್ಮಗೌರವ ಗಳಿಸಿಕೊಳ್ಳುವ ಕಡೆಗಿನ ಪ್ರಯಾಣವಾಗಿ ಮಾರ್ಪಡುತ್ತ 'ಮನುಷ್ಯ ಮನುಷ್ಯನಾಗಿರುವುದೆಂದರೆ ಏನು?' ಎಂಬ ಪ್ರಶ್ನೆಯನ್ನು ಓದುಗರಿಗೆ ಅನಿವಾರ್ಯವಾಗಿಸುತ್ತವೆ. ವ್ಯಕ್ತಿ ಮತ್ತು ಕುಟುಂಬದ ಹಿನ್ನೆಲೆಯ 'ದ ವೆಜಿಟೇರಿಯನ್' ಹಾಗೂ ಸಮಾಜ ಮತ್ತು ಇತಿಹಾಸದ ಹಿನ್ನೆಲೆಯ 'ಹ್ಯೂಮನ್ ಆಕ್ಟ್ಸ್' ಕಾದಂಬರಿಗಳು ಅಂತಿಮವಾಗಿ ಶೋಧಿಸುವುದು ಮನುಷ್ಯ ಹೃದಯ ಮತ್ತು ಅವನ ತಾತ್ವಿಕ ನೆಲೆಗಳನ್ನು.

## ತೇಜಶ್ರೀ

ಕವಯಿತ್ರಿ, ಅನುವಾದಕಿ ತೇಜಶ್ರೀ ಹಾಸನದಲ್ಲಿ ನೆಲೆಸಿದ್ದಾರೆ. 'ಲಯ', 'ತಿಳಿಗೊಳ', 'ಉಸ್ರುಬಂಡೆ', 'ಮಾಗಿ ಕಾಲದ ಸಾಲುಗಳು', 'ಅವನರಿವಲ್ಲಿ' ಅವರ ಕವನ ಸಂಗ್ರಹಗಳಾಗಿವೆ. ಲೇಖಕ ಯು.ಆರ್. ಅನಂತಮೂರ್ತಿ ಅವರ ಆತ್ಮಕತೆ 'ಸುರಗಿ'ಯ ಸಂಯೋಜನೆ–ನಿರೂಪಣೆ ಮಾಡಿದ್ದಾರೆ. 'ಚೀನಿ ತತ್ವಶಾಸ್ತ್ರದ ಕತೆ', 'ಕಡಲ ತಡಿಯ ಗುಡಾರ', 'ಬೆತ್ತಲೆ ಫಕೀರ', 'ನನ್ನೊಳಗೆ ನಿನ್ನ ನಡಿಗೆ' ಅವರ ಅನುವಾದಿತ ಪುಸ್ತಕಗಳು. ಇತ್ತೀಚೆಗೆ ರಷ್ಯಾ ಲೇಖಕ ಲಿಯೋ ಟಾಲ್‌ಸ್ಟಾಯ್ ಪ್ರಸಿದ್ಧ ಕಾದಂಬರಿ 'ಅನ್ನಾ ಕರೆನಿನ'ದ ಸಂಗ್ರಹ ಅನುವಾದ ಪ್ರಕಟಿಸಿದ್ದಾರೆ.